# ಒಳಿತಾಗಲು ಒಳಿತನ್ನೇ ಮಾಡು

■ ಬಾಲು ಪಟಗಾರ, ಕುಮಟಾ
ಕಲೆ: ಸಂತೋಷ್ ಸಸಿಹಿತ್ಲು

ಅದೊಂದು ಅಘನಾಶಿನಿ ನದಿಯ ದಡದಲ್ಲಿರುವ ಪುಟ್ಟ ಊರು. ಆ ಊರಿನ ಹೃದಯ ಭಾಗದಲ್ಲಿ ಒಂದು ಪ್ರಾಥಮಿಕ ಶಾಲೆ. ಅಲ್ಲಿಯ ಈ ಶಾಲೆಯಲ್ಲಿ ಇತ್ತೀಚಿನ ದಿನಗಳಲ್ಲಿ ಹಲವಾರು ಚಟುವಟಿಕೆಗಳನ್ನು ಸಂಘಟಿಸುವುದರ ಮೂಲಕ ತನ್ನತ್ತ ಎಲ್ಲರ ಗಮನ ಸೆಳೆಯುತ್ತಿದೆ. ಅಲ್ಲಿಯ ಶಿಕ್ಷಕರು ವಿನೂತನ ವಿಧಾನಗಳ ಮೂಲಕ ಕಲಿಕೆಯನ್ನು ವಿದ್ಯಾರ್ಥಿಗಳಿಗೆ ಮಾಡಿಸುವುದರ ಮೂಲಕ ವಿದ್ಯಾರ್ಥಿಗಳಲ್ಲಿ ಅವರ ಪಾಲಕರಲ್ಲಿ ವಿಶ್ವಾಸವನ್ನು ಮೂಡಿಸಿದ್ದಾರೆ.

ಅದೇ ರೀತಿ ಈ ವರ್ಷವೂ ಈ ಶಾಲೆಯಲ್ಲಿ ‘ಸ್ಕೂಲ್ ಡೇ’, ಮೆಟ್ರಿಕ್ ಮೇಳ, ‘ಪ್ರತಿಭಾ ಕಾರಂಜಿ, ಕಲಿಕಾ ಹಬ್ಬ’ ಮೊದಲಾದ ಚಟುವಟಿಕೆಗಳನ್ನು ಯಶಸ್ವಿಯಾಗಿ ಮುಗಿಸಿದ ಮೇಲೆ ಅಲ್ಲಿಯ ಶಿಕ್ಷಕರು ಒಂದು ದಿನ ಎಲ್ಲರನ್ನೂ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದರು. ಅದೊಂದು ಪ್ರಸಿದ್ಧ ದೇವಸ್ಥಾನ. ಅಲ್ಲಿ ನಿತ್ಯವೂ ಸಾವಿರಾರು ಭಕ್ತರು, ಪ್ರವಾಸಿಗರು ಬರುತ್ತಿದ್ದರು. ಆ ದೇವಾಲಯದ ಅಕ್ಕಪಕ್ಕದಲ್ಲಿ ಅನೇಕ ಗಿಡಮರಗಳಿದ್ದವು. ಅಲ್ಲಿ ಅನೇಕ ಕೋತಿಗಳು ವಾಸವಾಗಿದ್ದವು. ಪ್ರವಾಸಿಗರು ಕೊಡುವ ತಿಂಡಿಗಳನ್ನು ತಿಂದು, ತುಂಟಾಟ ಮಾಡುತ್ತ ಆ ಕೋತಿಗಳ ಹಿಂಡು ಹಾಯಾಗಿದ್ದವು.



## ಕುಂಚ ಪ್ರಪಂಚ

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ ‘ಕುಂಚ ಪ್ರಪಂಚ’ ವಿಭಾಗಕ್ಕೆ ಕಳಿಸಿಕೊಡಿ.

ವಿಳಾಸ:
editorsu@sudha.co.in





ವರ್ಣವಿ ರಾವ್
3ನೇ ತರಗತಿ, ಹ್ಯಾಪಿವ್ಯಾಲಿ ಸ್ಕೂಲ್, ಬೆಂಗಳೂರು